# ಸ್ಲಿಂಗ್ ಬ್ಯಾಗ್





## ಈ ಟ್ಯುಟೋರಿಯಲ್ ನಲ್ಲಿ ನೀವು ಟ್ರೆಂಡಿ ಸ್ಲಿಂಗ್ ಬ್ಯಾಗ್ ಒಂದನ್ನು ಮಾಡಲು ಕಲಿಯುವಿರಿ



ನೀವು ಧರಿಸಲು ಉತ್ಸುಕವಾಗಿರುವ ಒಂದು ಸುಂದರವಾದ ಉಡುಪು ನಿಮ್ಮ ಬಳಿ ಇದೆ ಆದರೆ ಅದಕ್ಕೆ ಮ್ಯಾಚಿಂಗ್ ಬ್ಯಾಗ್ ಇಲ್ವಾ? ನಮ್ಮ ಬಳಿ ಇದಕ್ಕೊಂದು ಪರಿಹಾರವಿದೆ - ನಿಮ್ಮ ಬಟ್ಟೆಗೆ ಸರಿಹೊಂದುವ ಮತ್ತು ಅದನ್ನು ಪೂರ್ಣಗೊಳಿಸುವ ಬ್ಯಾಗೊಂದನ್ನೂ ನೀವೇ ಏಕೆ ತಯಾರಿಸಬಾರದು. ಈ ಟ್ಯುಟೋರಿಯಲ್ ನಲ್ಲಿ ನೀವು ಟ್ರೆಂಡಿ ಸ್ಲಿಂಗ್ ಬ್ಯಾಗ್ ಒಂದನ್ನು ಮಾಡಲು ಕಲಿಯುವಿರಿ. ಒಯ್ಯುವುದು ಚೆಂದ ಮತ್ತು ನಿಮ್ಮ ಸ್ನೇಹಿತರೊಂದಿಗಿನ ಒಂದು ಪಾರ್ಟಿಯ ದಿನಕ್ಕೆ ನಿಮಗೆ ಬೇಕಾಗಿರುವ ಎಲ್ಲಾ ಸಣ್ಣ ಪುಟ್ಟ ವಸ್ತುಗಳನ್ನು ತೆಗೆದುಕೊಂಡುಹೋಗಲು ಉಪಯುಕ್ತವಾದುದು.

ಈ ಬ್ಯಾಗನ್ನು ತಯಾರಿಸಲು ನಿಮಗೆ ಬೇಕಾಗಿರುವುದು- 23 x 13 ಇಂಚುಗಳಷ್ಟು ಅಳತೆಯಿರುವ ನಿಮ್ಮ ಆಯ್ಕೆಯ ಬಟ್ಟೆಯ ತುಂಡು - ನೀವು ಇಲ್ಲಿ ನೋಡಬಹುದು ನಾವು ಅದೇ ಅಳತೆಯ ಜ್ಯಾಮಿತೀಯ ನೇಯ್ಗೆ, ಫ್ಯೂಸಿಂಗ್ ಮತ್ತು ಲೈನಿಂಗ್ ಇರುವ ಸುಂದರವಾದ ಬಟ್ಟೆಯನ್ನು ತೆಗೆದುಕೊಂಡಿದ್ದೇವೆ, ಒಂದು ಮಾರ್ಕರ್, ಎರಡು 2.5 ಇಂಚುಗಳ ಅಳತೆಯಿರುವ ಬಟ್ಟೆಯ ಎರಡು ಸಣ್ಣ ಪಟ್ಟಿಗಳು, ಬ್ಯಾಗನ್ನು ಮುಚ್ಚುವುದಕ್ಕಾಗಿ ಮ್ಯಾಗ್ನೆಟಿಕ್ ಬಟನ್, ಅಟಾಚ್ ಮಾಡುವುದಕ್ಕಾಗಿ ಒಂದು ಚೈನ್ - ಇದರ ಉದ್ದ ನಿಮಗೆ ಅನುಕೂಲಕರವಾಗಿರಬೇಕು ಎಂಬುದನ್ನು ನೆನಪಿನಲ್ಲಿಡಿ, ಒಂದು ಸೀಮ್ ರಿಪ್ಪರ್, ಕತ್ತರಿ, ಕೆಲವು ಪಿನ್ಗಳು ಮತ್ತು ಐರನ್ ಬಾಕ್ಸ್.

ನಮ್ಮ ವೆಬ್ಸೈಟ್ನಿಂದ ಸ್ಲಿಂಗ್ ಬ್ಯಾಗ್ನ ಡ್ರಾಫ್ಟ್ ಅನ್ನು ಡೌನ್ಲೋಡ್ ಮಾಡುವುದು ಮೊದಲ ಹಂತ.
ನಿಮ್ಮ ಬಳಿ ಈಗ ಡ್ರಾಫ್ಟ್ ಇರುವುದರಿಂದ, ಬನ್ನಿ ಮುಂದುವರೆಯೋಣ. ಫ್ಯೂಸಿಂಗ್ ಬಟ್ಟೆಯ ಹೊಳೆಯುವ ಬದಿಯನ್ನು ಪ್ರಿಂಟೆಡ್ ಫ್ಯಾಬ್ರಿಕ್ ನ ಉಲ್ಟಾ ಭಾಗದಮೇಲೆ ತಲೆ ಕೆಳಗಾಗಿ ಇರಿಸಿ. ಫ್ಯೂಸಿಂಗ್ ಫ್ಯಾಬ್ರಿಕ್ ಕೆಳಗಿರುವಾಗ ಪ್ರಿಂಟೆಡ್ ಬಟ್ಟೆಯ ಮೇಲೆ ಐರನ್ ಮಾಡಿ. ಬಟ್ಟೆಗಳು ಫ್ಯೂಸ್ ಆದ ನಂತರ, ಪ್ರಿಂಟೆಡ್ ಬಟ್ಟೆ ನಿಮ್ಮ ಕಡೆಗೆ ಇರುವಂತೆ ಅದನ್ನು ಲೈನಿಂಗ್ ಬಟ್ಟೆಯ ಮೇಲೆ ಇಡಿ.



ಫ್ಯಾಬ್ರಿಕ್ ನ ಮೇಲೆ ಡ್ರಾಫ್ಟ್ ಅನ್ನು ತೆರೆದು ಇಡಿ. ಇದನ್ನು ಪಿನ್ ಮಾಡಿ. ಮಾರ್ಕರ್ನ ಸಹಾಯದಿಂದ ಬಟ್ಟೆಯ ಮೇಲೆ ಡ್ರಾಫ್ಟ್ ಅನ್ನು ಔಟ್ಲೈನ್ ಮಾಡಿ. ಡ್ರಾಫ್ಟ್ ನ ಆಕಾರದಲ್ಲಿ ಬಟ್ಟೆಗಳನ್ನು ಪಡೆಯಲು ಎಚ್ಚರಿಕೆಯಿಂದ ಮತ್ತು ನಿಖರವಾಗಿ ಗುರುತುಮಾಡಿದ ರೇಖೆಗಳೊಂದಿಗೆ ಬಟ್ಟೆಯನ್ನು ಕತ್ತರಿಸಿ.

ಡ್ರಾಫ್ಟ್ನಲ್ಲಿ ಎರಡು ಪಾಯಿಂಟ್ಗಳಿವೆ ಎಂಬುದನ್ನು ಗಮನಿಸಿ - ಇಲ್ಲಿ ಮತ್ತು ಇಲ್ಲಿ. ಅವು ಮ್ಯಾಗ್ನೆಟಿಕ್ ಬಟನ್ನಿನ ಎರಡು ಭಾಗಗಳು. ಬಟ್ಟೆಯ ಮೇಲಿನ ಪದರದ ಮೇಲೆ ಈ ಎರಡೂ ಬಿಂದುಗಳನ್ನು ಗುರುತಿಸಿ.

ಪಿನ್ಗಳನ್ನು ಒಂದೊಂದಾಗಿ ತೆಗೆದುಹಾಕಿ. ಎರಡು ಮ್ಯಾಗ್ನೆಟಿಕ್ ಬಟನ್ ಪಾಯಿಂಟ್ಗಳನ್ನು ಗುರುತು ಮಾಡಲು ಲೈನಿಂಗ್ ಫ್ಯಾಬ್ರಿಕ್ ನ ಮೇಲೆ ಡ್ರಾಫ್ಟನ್ನು ಇರಿಸಿ. ಲೈನಿಂಗ್ ಫ್ಯಾಬ್ರಿಕ್ ನ ಮೇಲೆ ಮ್ಯಾಗ್ನೆಟಿಕ್ ಬಟನನ್ನು ಇಡಿ... ಹೀಗೆ. ಅದನ್ನು ಹಿಡಿದುಕೊಳ್ಳಿ ಇಲ್ಲಿ ಪ್ರಾಂಗ್ ಗಳಿಗೆ ಸಮಾನವಾದ ಗುರುತುಗಳನ್ನು ಮಾಡಿ. ಇಲ್ಲಿ ತೋರಿಸಿರುವಂತೆ ಮಾರ್ಕರ್ ಗಳಿಗೆ ಜೋಡಿಸಿದ ಮೂಲೆಯಲ್ಲಿ 1.5 ಇಂಚುಗಳಷ್ಟು ಎರಡು ಸಣ್ಣ ನೇರ ಗೆರೆಗಳನ್ನು ಮಾಡಿ. ಸೀಮ್ ರಿಪ್ಪರ್ನ ಸಹಾಯದಿಂದ ಈ ಗುರುತು ಮಾಡಿದ ಗೆರೆಗಳ ಮೇಲೆ ಕಾಲು ಇಂಚಿನ ಸ್ಲಿಟ್ ಮಾಡಿ. ಮ್ಯಾಗ್ನೆಟಿಕ್ ಬಟನ್ನಿನ ಪ್ರಾಂಗ್ ಗಳನ್ನು ಸ್ಲಿಟ್ ಗಳ ಒಳಗೆ ಸೇರಿಸಿ. ಪ್ರಾಂಗ್ ಗಳ ಹಿಂಭಾಗದಿಂದ ಬಟನ್ನಿನ ರಿಂಗನ್ನು ಸೇರಿಸಿ ಮತ್ತು ಪ್ರಾಂಗ್ ಗಳನ್ನು ಚಪ್ಪಟೆ ಮಾಡಿ. ಇದು ಮ್ಯಾಗ್ನೆಟಿಕ್ ಬಟನ್ನಿನ ಒಂದು ಭಾಗವಾಗಿದೆ. ಈಗ ನಾವು ಬಟನ್ನಿನ ಇನ್ನೊಂದು ಭಾಗಕ್ಕೆ ಹೋಗೋಣ.

ಮ್ಯಾಗ್ನೆಟಿಗ್ ಬಟನ್ನಿನ ವಿರುದ್ಧ ಭಾಗವನ್ನು ಪ್ರಿಂಟೆಡ್ ಮತ್ತು ಫ್ಯೂಸಿಂಗ್ ಬಟ್ಟೆಯ ಮೇಲೆ ಮುಂಚೆಯೇ ಗುರುತಿಸಲಾದ ಹತ್ತಿರ ಮೇಲೆ ಸರಿಪಡಿಸಬೇಕು. ಬಟನ್ ಭಾಗದ ಎರಡು ಪ್ರಾಂಗ್ ಗಳನ್ನು ಗುರುತು ಮಾಡಿ ಮತ್ತು ಎರಡು ಸ್ಲಿಟ್ಗಳನ್ನು ರಚಿಸಲು ಇದೇ ರೀತಿಯ ಸಾಲುಗಳನ್ನು ಮಾಡಿ. ಉಳಿದ ಲೈನಿಂಗ್ ಬಟ್ಟೆಯಿಂದ ಸಣ್ಣ ಚೌಕವನ್ನು ಕತ್ತರಿಸಿ ಮತ್ತು ಸ್ಲಿಟ್ಗಳನ್ನು ಜೋಡಿಸಲು ಚೌಕವನ್ನು ಬಟ್ಟೆಯ ಹಿಂದೆ ಇಡಿ. ಅದರ ಮೇಲೂ ಎರಡು ಸ್ಲಿಟ್ ಗಳನ್ನು ಮಾಡಲು ಸೀಮ್ ರಿಪ್ಪರ್ ಅನ್ನು ಬಳಸಿ. ನೀವು ಆ ಚೌಕದ ತುಂಡನ್ನು ಭದ್ರವಾಗಿ ಇಡಲು ಪಿನ್ ಮಾಡಬಹುದು.

ಸ್ಲಿಟ್ ಗಳಲ್ಲಿ ಪ್ರಾಂಗ್ಗಳನ್ನು ಸೇರಿಸಿ ಮತ್ತು ಲೈನಿಂಗ್ ಬಟ್ಟೆ ಅವುಗಳ ನಡುವೆ ಇರುವ ಹಾಗೆಯೇ ರಿಂಗ್ ಅನ್ನು ಅವುಗಳ ಮೂಲಕ ಸೇರಿಸಿ. ಬಟನ ಅನ್ನು ಅಲ್ಲಾಡದೇ ಹಿಡಿದಿಡಲು ಪ್ರಾಂಗ್ ಗಳನ್ನು ಚಪ್ಪಟೆಯಾಗಿ ಒತ್ತಿ. ಲೈನಿಂಗ್ ಬಟ್ಟೆ ಬಟನ್ ಅನ್ನು ಸರಿಯಾಗಿ ಹಿಡಿದಿಡಲು ಸಹಾಯ ಮಾಡುತ್ತದೆ. ಲೈನಿಂಗ್ ಬಟ್ಟೆಯ ಹೆಚ್ಚುವರಿ ಭಾಗವನ್ನು ಕತ್ತರಿಸಿ.



ಮುಂದೆ, ಪ್ರಿಂಟೆಡ್ ಬಟ್ಟೆಯ ಮೇಲೆ ಲೈನಿಂಗ್ ಬಟ್ಟೆಯನ್ನು ಪರಸ್ಪರ ಸರಿಯಾದ ಬದಿಯನ್ನು ಮುಖಾಮುಖಿಯಾಗಿ ಇರಿಸಿ. ಅವುಗಳನ್ನು ಪಿನ್ ಮಾಡಿ. ಬಟ್ಟೆಯ ಕೆಳಭಾಗದಲ್ಲಿ ನಾಲ್ಕು ಇಂಚುಗಳಷ್ಟು ಅಂತರದಲ್ಲಿ ಎರಡು ಗುರುತುಗಳನ್ನು ಮಾಡಿ. ಇವುಗಳು ನಿಮ್ಮ ಹೊಲಿಗೆ ಗುರುತುಗಳಾಗಿವೆ. ನಾವು ಒಂದು ಗುರುತಿನಿಂದ ಹೊಲಿಯುವುದನ್ನು ಪ್ರಾರಂಭಿಸುತ್ತೇವೆ, ಸುತ್ತಲೂ ಹೋಗಿ ಮತ್ತೊಂದು ಗುರುತಿನಲ್ಲಿ ಕೊನೆಗೊಳಿಸುತ್ತೇವೆ. ಹೊಲಿಗೆಯನ್ನು ನಾವು ಪೂರ್ಣಗೊಳಿಸಿದ ನಂತರ, ಬಟ್ಟೆಯನ್ನು ಸರಿಯಾದ ಭಾಗಕ್ಕೆ ತಿರುಗಿಸಲು ತೆರೆದ ಭಾಗವು ನಮಗೆ ಅನುಮತಿಸುತ್ತದೆ.

ಈಗ ತಯಾರಿಕೆಗಳು ಆಗಿರುವುದರಿಂದ, ನಿಟ್ಟುಸಿರು ಬಿಡಿ - ಅಂತೂ ಈಗ ಹೊಲಿಗೆಯನ್ನು ಆರಂಭಿಸುವ ಸಮಯ. ನೇರ ಹೊಲಿಗೆಗಳಿಗಾಗಿ ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್ ಅನ್ನು A ಗೆ ತಿರುಗಿಸಿ, ಸ್ಟಿಚ್ ಲೆಂಥ್ ಅನ್ನು 2.5 ಕ್ಕೆ ಹೊಂದಿಸಿ. ಹೊಲಿಗೆಯನ್ನು ಪ್ರಾರಂಭಿಸಿ. ಪ್ರಾರಂಭ ಮತ್ತು ಅಂತ್ಯದ ಭಾಗದಲ್ಲಿ ಲಾಕ್ ಸ್ಟಿಚ್ ಮಾಡಲು ಮರೆಯದಿರಿ. ನೀವು ತುದಿಗಳನ್ನು ತಿರುಗಿಸಿದಾಗ ಸೂಜಿಯು ಬಟ್ಟೆಯ ಮೇಲಿದೆ ಎಂದು ಖಚಿತಪಡಿಸಿಕೊಳ್ಳಿ. ನೀವು ಹೊಲಿಯುತ್ತಾ ಹೋದಂತೆ ಪಿನ್ಗಳನ್ನು ತೆಗೆಯುವುದನ್ನು ಮರೆಯದಿರಿ.

ಹೊಲಿಗೆಯಾದ ನಂತರ ದಾರವನ್ನು ಕತ್ತರಿಸಿ. ಈಗ ಎರಡೂ ಬಟ್ಟೆಯ ತುಂಡುಗಳು ಸೇರಿಕೊಂಡಿರುವುದರಿಂದ ಅದಕ್ಕೆ ಅಚ್ಚುಕಟ್ಟಾದ ಮತ್ತು ಬಲವಾದ ಫಿನಿಶ್ ಅನ್ನು ನೀಡಲು ನಾವು ಎಲ್ಲಾ ಕಡೆಗಳಲ್ಲಿ ಝಿಗ್-ಝ್ಯಾಗ್ ಸ್ಟಿಚ್ ಅನ್ನು ಮಾಡುತ್ತೇವೆ. ಝಿಗ್-ಝ್ಯಾಗ್ ಸ್ಟಿಚ್ಗಾಗಿ ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್ ಅನ್ನು C ಗೆ ತಿರುಗಿಸಿ ಮತ್ತು ಸ್ಟಿಚ್ ಲೆಂಥ್ ಅನ್ನು 1.5 ಗೆ ಹೊಂದಿಸಿ. ನೇರ ಹೊಲಿಗೆಯ ನಂತರ ಅಂಚುಗಳ ಉದ್ದಕ್ಕೂ ಝಿಗ್-ಝ್ಯಾಗ್ ಸ್ಟಿಚ್ ಬಳಸಿ ಬದಿಗಳನ್ನು ಹೊಲಿಯಿರಿ.

ಹೆಚ್ಚುವರಿ ದಾರವನ್ನು ಕತ್ತರಿಸಿದ ನಂತರ, ನೀವು ಬಿಟ್ಟಿದ್ದ ತೆರೆದ ಭಾಗದ ಮೂಲಕ ಬ್ಯಾಗನ್ನು ಸರಿಯಾದ ಬದಿಗೆ ತಿರುಗಿಸಿ. ಇದನ್ನು ಇಲ್ಲಿ ಹೇಗೆ ಮಾಡಲಾಗುತ್ತಿದೆ ಎಂಬುದನ್ನು ನೋಡಿ ... ಮೂಲೆಯ ಭಾಗಗಳನ್ನು ತಿರುಗಿಸುವಾಗ ನಿರ್ದಿಷ್ಟ ಗಮನವನ್ನು ಕೊಡಿ. ಅವು ಸರಿಯಾದ ಆಕಾರದಲ್ಲಿ ಹೊರಬರುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಮೂಲೆಗಳನ್ನು ಸರಿಯಾಗಿ ಹೊರಗೆಳೆಯಲು ನೀವು ಸೀಮ್ ರಿಪ್ಪರ್ ಅನ್ನು ಬಳಸಬಹುದು. (ಇಲ್ಲೊಂದು ತಕ್ಷಣದ ಹ್ಯಾಕ್ - ನೀವು ಮೂಲೆಗಳನ್ನು ತಳ್ಳಲು ಮರದ ಕಡ್ಡಿಯನ್ನು ಕೂಡ ಬಳಸಬಹುದು)




ಅಂಚುಗಳಿಗೆ ಸ್ಥಿರವಾದ ಆಕಾರವನ್ನು ನೀಡಲು ಅವುಗಳನ್ನು ಐರನ್ ಮಾಡಿ. ತೆರೆದ ಸ್ಲಿಟ್ನ ಉದ್ದಕ್ಕೂ ಅಂಚುಗಳನ್ನು ಮಡಚಿ, ತೋರಿಸಿರುವಂತೆ .... ಮತ್ತು ಅದನ್ನು ಪಿನ್ ಮಾಡಿ. ಬ್ಯಾಗ್ ನ ಆಕಾರವನ್ನು ನೀಡಲು ಬಟ್ಟೆಯನ್ನು ಅರ್ಧಕ್ಕೆ ಮಡಚಿ ಮತ್ತು ಮಧ್ಯಭಾಗದಲ್ಲಿ ಅದನ್ನು ಪಿನ್ ಮಾಡಿ.

ಮುಂದೆ ನಾವು ಬ್ಯಾಗ್ ನ ಎಲ್ಲಾ ಬದಿಗಳನ್ನು ಹೊಲಿಯುತ್ತೇವೆ. ಬದಿಯಲ್ಲಿರುವ ಸೀಮ್ ಗಳನ್ನು ಹೊಲಿಯುವಾಗ, ನಾವು ಮ್ಯಾಚಿಂಗ್ ಬಟ್ಟೆಯೊಂದರ ಎರಡು ಪಟ್ಟಿಗಳನ್ನೂ ಸಹ ಮಡಚುತ್ತೇವೆ (ನೀವು ಅದನ್ನು ಮಡಚಿ ಹೊಲಿಯಬೇಕು) ಮತ್ತು ಈ ರೀತಿ ಎರಡೂ ಅಂಚುಗಳಲ್ಲಿ ಅವುಗಳನ್ನು ಸೇರಿಸಬೇಕು. ಅವು ಚೈನ್ ಸ್ಲಿಂಗ್ ಅನ್ನು ಹಿಡಿದಿಟ್ಟುಕೊಳ್ಳುತ್ತವೆ.

ನೇರವಾದ ಹೊಲಿಗೆಗಾಗಿ ನಿಮ್ಮ ಮಶೀನಿನ ಪ್ಯಾಟರ್ನ್ ಸೆಲೆಕ್ಟರ್ ಅನ್ನು A ಗೆ ಹೊಂದಿಸಿ ಮತ್ತು ಸ್ಟಿಚ್ ಲೆಂಥ್ ಅನ್ನು 2.5 ಗೆ ಹೊಂದಿಸಿ. ಬ್ಯಾಗನ್ನು ಈ ರೀತಿಯಲ್ಲಿ ಇಟ್ಟುಕೊಂಡು ಮೇಲಿನ ಅಂಚನ್ನು ಹೊಲಿಯುವುದರ ಮೂಲಕ ಪ್ರಾರಂಭಿಸಿ. ಮೇಲ್ಭಾಗದ ಸಮತಲ ತುದಿಯನ್ನು ಮಾತ್ರ ಹೊಲಿಯಿರಿ ಮತ್ತು ಹಿಂಬದಿಯನ್ನು ಹೊಲಿದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಮೇಲಿನ ಅಂಚನ್ನು ಮುಗಿಸಿದ ನಂತರ, ನಾವು ಬದಿಯಲ್ಲಿರುವ ಸೀಮ್ ಗಳನ್ನು ಒಟ್ಟಾಗಿ ಹೊಲಿಯುತ್ತೇವೆ. ಇಲ್ಲಿ, ಕಿರಿದಾದ ಬಟ್ಟೆಯ ಪಟ್ಟಿಯನ್ನು ಚೈನ್ ಗೆ ಸೇರಿಸಿ. ಸ್ಟ್ರಿಪ್ ಅನ್ನು ಮಡಚಿ ಮತ್ತು ಎರಡು ಬದಿಯ ಸೀಮ್ ಗಳ ನಡುವೆ ಅದನ್ನು ಸೇರಿಸಿ. ಬದಿಯ ಸೀಮ್ ನ ಉದ್ದಕ್ಕೂ ಹೊಲಿಯಿರಿ. ತುದಿಗಳಲ್ಲಿ ರಿವರ್ಸ್ ಸ್ಟಿಚ್ ಮಾಡಲು ಮರೆಯದಿರಿ - ನಿಮ್ಮ ಸ್ಲಿಂಗ್ ಬ್ಯಾಗ್ ನ ಮೂಲೆಯಲ್ಲಿರುವ ಸಣ್ಣ ತೂತುಗಳಿಂದ ನಿಮ್ಮ ಅಮೂಲ್ಯವಾದ ವಸ್ತುಗಳು ಹೊರಗೆ ಬೀಳುವುದು ಸರಿಯಿರುವುದಿಲ್ಲ.

ಸ್ಲಿಂಗ್ ಬ್ಯಾಗ್ ನ ಫ್ಲಾಪ್ ನ ಉದ್ದಕ್ಕೂ ಹೊಲಿಯುವುದನ್ನು ಮುಂದುವರಿಸಿ, ಮತ್ತು ಇನ್ನೊಂದೆಡೆಗೆ ಮುಂದುವರಿಯಿರಿ. ಇತರ ಸ್ಟ್ರಿಪ್ ಅನ್ನು ಸೇರಿಸುವಾಗ ಚೈನ್ ನೇರವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಸ್ಟ್ರಿಪ್ ಅನ್ನು ಮಡಚಿ ಮತ್ತು ಅದನ್ನು ಬದಿಯಲ್ಲಿರುವ ಸೀಮ್ ಗಳ ನಡುವೆ ಇರಿಸಿ. ಬದಿಯ ಸೀಮ್ ಅನ್ನು ಹೊಲಿಯಲು ಮುಂದುವರಿಸಿ.

ಇದಾದ ನಂತರ, ಹೆಚ್ಚುವರಿ ದಾರಗಳನ್ನು ಕತ್ತರಿಸಿ ಮತ್ತು ಪಿನ್ಗಳನ್ನು ತೆಗೆದುಹಾಕಿ. ಅಲಂಕಾರಿಕ ಆಭರಣವೊಂದನ್ನು ಬಳಸಿ ಸಹ ನಿಮ್ಮ ಬ್ಯಾಗನ್ನು ಸುಂದರಗೊಳಿಸಬಹುದು

ನಿಮ್ಮ ಸುಂದರವಾದ ಸ್ಲಿಂಗ್ ಬ್ಯಾಗ್ ಈಗ ತೋರ್ಪಡಿಕೆಗೆ ಸಿದ್ಧವಾಗಿದೆ. ಅದು ಸುಂದರವಾಗಿತ್ತು ಮತ್ತು ಅದರ ಪರಿಣಾಮ ಇನ್ನಷ್ಟು ಸುಂದರ... ನಮ್ಮ ಇತರ ಬ್ಯಾಗ್ ಟ್ಯುಟೋರಿಯಲ್ಗಳನ್ನು ನೋಡಿ, ನೀವು ನಿಮ್ಮದೇ ಆದ ವೈವಿಧ್ಯಮಯ ಬ್ಯಾಗ್ ಗಳನ್ನು ಶೋ ಆಫ್ ಮಾಡಬಹುದು. ಹೆಚ್ಚಿದ್ದಲ್ಲಿ ಸಂತೋಷ ಹೆಚ್ಚು.